RNU AIR DHARWAD

DECEMBER 28, 2025

**AKASHAVANI - DHARWAD**

**PRADESH SAMACHARA (KANNADA) 12.00 P.M.**

<><><>

**ಆಕಾಶವಾಣಿ**

**ಪ್ರದೇಶ ಸಮಾಚಾರ**

<><><>

**ಭಾರತ ಸ್ಕೌಟ್ಸ್ ಮತ್ತು ಗೈಡ್ಸ್ ಮೂಲಕ ಮಕ್ಕಳಲ್ಲಿ ವ್ಯಕ್ತಿತ್ವ ರೂಪಿಸುವ ಕೆಲಸವಾಗುತ್ತಿದೆ. ಭಾರತ ದೇಶ ಎಲ್ಲ ಕ್ಷೇತ್ರಗಳಲ್ಲೂ ವಿಶ್ವದಲ್ಲೇ ಮೊದಲ ಸ್ಥಾನ ಪಡೆಯುವುದು ಪ್ರತಿಯೊಬ್ಬರ ಕನಸನಾಗಿದ್ದು, ಇದನ್ನು ನನಸು ಮಾಡುವ ಕಾರ್ಯ, ವಿದ್ಯಾರ್ಥಿಗಳು ಹಾಗೂ ಭಾವಿ ಪೀಳಿಗೆಯಿಂದ ಸಾಧ್ಯವಿದೆ ಎಂದು ವಿಧಾನಸಭೆ, ಸಭಾಧ್ಯಕ್ಷ ಯು.ಟಿ.ಖಾದರ ಅಭಿಪ್ರಾಯಪಟ್ಟಿದ್ದಾರೆ. ಬೆಳಗಾವಿ ಹೊರವಲಯದ, ಹೊನಗಾ ಗ್ರಾಮದ, ಫೀನಿಕ್ಸ್ ಪಬ್ಲಿಕ್ ಶಾಲೆಯಲ್ಲಿ ಆಯೋಜಿತ, 29 ನೇ ಭಾರತ ಸ್ಕೌಟ್ಸ್ ಮತ್ತು ಗೈಡ್ಸ್ ಜಾಂಬೋರೇಟ್ –2025 ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು. ವಿಧಾನ ಪರಿ ’ತ್ ಸಭಾಧ್ಯಕ್ಷರಾದ, ಬಸವರಾಜ ಹೊರಟ್ಟಿ ಮಾತನಾಡಿ, ಮಕ್ಕಳಿಗೆ ಶಿಕ್ಷಣದೊಂದಿಗೆ, ಶಿಸ್ತಿನ ಜೀವನ ರೂಪಿಸಲು ಸ್ಕೌಟ್ಸ್ ಮತ್ತು ಗೈಡ್ ಸಹಕಾರಿಯಾಗಿದೆ ಎಂದರು. ಶಿಕ್ಷಣ ಮತ್ತು ಸಾಕ್ಷರತೆ ಖಾತೆ ಸಚಿವ ಮಧು ಬಂಗಾರಪ್ಪ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು.**

<><><>

**ಯುವಕರಲ್ಲಿ ರಾಷ್ಟ್ರ ನಿರ್ಮಾಣದ ಕೊಡುಗೆಗಳನ್ನು ಉದ್ದೀಪಿಸಲು ಹಾಗೂ ಅವರ ಆಲೋಚನೆಗಳಿಗೆ ವೇದಿಕೆ ಕಲ್ಪಿಸುವ ಉದ್ದೇಶದಿಂದ, ಆರಂಭಿಸಿರುವ ‘ವಿಕಸಿತ ಭಾರತ ಯುವ ನಾಯಕರ ಸಂವಾದ’ ಕಾರ್ಯಕ್ರಮ ಸಹಕಾರಿಯಾಗಿದೆ. ಜನೆವರಿ 12, ಸ್ವಾಮಿ ವಿವೇಕಾನಂದರ ಜನ್ಮದಿನದಂದು, ಎರಡನೇ ಆವೃತ್ತಿಯ, ವಿಕಸಿತ ಭಾರತ ಯುವ ನಾಯಕರ ಸಂವಾದ ಕಾರ್ಯಕ್ರಮ ಆಯೋಜಿತವಾಗಿದೆ ಎಂದು ಪ್ರಧಾನಮಂತ್ರಿ ನರೇಂದ್ರ ಮೋದಿ ಹೇಳಿದರು. ಆಕಾಶವಾಣಿಯ ಜನಪ್ರಿಯ ‘ಮನ್ ಕಿ ಬಾತ್’ ಕಾರ್ಯಕ್ರಮದ, 129 ನೇ ಅವೃತ್ತಿಯಲ್ಲಿ, ದೇಶ, ವಿದೇಶಗಳ ಭಾರತೀಯರನ್ನು ಉದ್ದೇಶಿಸಿ, ಅವರು ಮಾತನಾಡಿದರು. ಯುವ ಸಂವಾದದ ಮೂಲಕ ನಾವೀನ್ಯತೆ, ಫಿಟನೆಸ್, ಸ್ಟಾರ್ಟ ಅಪ್ ಗಳು ಮತ್ತು ಕೃಷಿಯಂತಹ ಪ್ರಮುಖ ವಿಷಯಗಳ ಕುರಿತು ಯುವಕರು ತಮ್ಮ ಆಲೋಚನೆಗಳನ್ನು ಹಂಚಿಕೊಳ್ಳಲಿದ್ದಾರೆ ಎಂದರು.**

<><><>

**ರಾ ್ಟ್ರಪತಿ ದ್ರೌಪದಿ ಮುರ್ಮು ಅವರು, ಇಂದು ಬೆಳಗ್ಗೆ ಗೋವಾದಿಂದ, ಉತ್ತರಕನ್ನಡ ಜಿಲ್ಲೆ, ಕಾರವಾರದ ಐಎನ್ಎಸ್ ಕದಂಬ ನೌಕಾನೆಲೆಗೆ ಹೆಲಿಕಾಪ್ಟರ್ ಮೂಲಕ ಆಗಮಿಸಿದ್ದಾರೆ. ನೌಕಾನೆಲೆಯ ಹೆಲಿಪ್ಯಾಡ್ ಗೆ ಬಂದಿಳಿದ ರಾಷ್ಟ್ರಪತಿ ಅವರನ್ನು, ರಾಜ್ಯಪಾಲರಾದ ಥಾವರ್ ಚಂದ್ ಗೆಹ್ಲೋಟ್ ಸ್ವಾಗತಿಸಿ, ಬರಮಾಡಿಕೊಂಡರು. ಪ್ರಸ್ತುತ ರಾ ್ಟ್ರಪತಿಯವರು, ಐ.ಎನ್.ಎಸ್ ಕದಂಬ ನೌಕಾನೆಲೆಯ, ಕಾರವಾರದ ದಕ್ಕೆಯಿಂದ, ಸಬ್ ಮರಿನ್ ನಲ್ಲಿ ಸೀ ಸೊರ್ಟಿ– ಸಮುದ್ರಯಾನ ಕೈಗೊಂಡಿದ್ದಾರೆ. ಐ.ಎನ್.ಎಸ್ ಕದಂಬ ನೌಕಾನೆಲೆಗೆ, ರಾ ್ಟ್ರಪತಿ ದ್ರೌಪದಿ ಮುರ್ಮು ಅವರ ಪ್ರಥಮ ಭೇಟಿ ಇದಾಗಿದೆ.**

ರಾ ್ಟ್ರಪತಿ ಭೇಟಿ ಹಿನ್ನೆಲೆ, ಇಂದು ಮಧ್ಯಾಹ್ನ 3.30ರ ವರೆಗೆ ಹಾರವಾಡದಿಂದ ಮಾಜಾಳಿಯ ವರೆಗಿನ, ಸಮುದ್ರ ತೀರದಲ್ಲಿ ಮೀನುಗಾರಿಕೆಯನ್ನು ಸಂಪೂರ್ಣ  ನಿರ್ಬಂಧಿಸಲಾಗಿದೆ.

<><><>

ಕರ್ನಾಟಕ ಭಾಮಿನಿ ಷಟ್ಪದಿಯಲ್ಲಿ ವಿರಚಿತ, 16 ಸಾವಿರ ಪದ್ಯಗಳನ್ನು ಒಳಗೊಂಡಿರುವ, ಕನ್ನಡದ ಮಹಾಕಾವ್ಯ 'ಶ್ರೀಕೃಷ್ಣ ಲೀಲಾಮೃತ', ಕೃತಿ ಲೋಕಾರ್ಪಣೆಯು, ವಿಜಯನಗರ ಜಿಲ್ಲೆ, ಹೊಸಪೇಟೆಯ ವೆಂಕಟೇಶ್ವರ ಕಲ್ಯಾಣ ಮಂಟಪದಲ್ಲಿ ಜರುಗಿತು. ಹಿರಿಯ ಸಾಹಿತಿ ಹಾಗೂ ಬೆಂಗಳೂರು ಸಂಸ್ಕೃತ ವಿಶ್ವವಿದ್ಯಾಲಯದ ವಿಶ್ರಾಂತ  ಉಪ ಕುಲಪತಿ, ಮಲ್ಲೇಪುರಂ ವೆಂಕಟೇಶ, ಕೃತಿಯನ್ನು ಲೋಕಾರ್ಪಣೆಗೊಳಿಸಿದರು. ಸುಮಾರು 16 ವರ್ಷಗಳ ಕಾಲ ಸತತ ಪ್ರಯತ್ನದ ಮೂಲಕ ರಚಿಸಲ್ಪಟ್ಟ ಮಹಾಕಾವ್ಯದ ಕುರಿತು ಮಾಹಿತಿ ನೀಡಿದ್ದಾರೆ, ಕೃತಿಕಾರ ವಿಜಯನಗರ ಜಿಲ್ಲೆ, ಹೊಸಪೇಟೆ ನಿವಾಸಿ, ಗಮಕ ಕಲಾನಿಧಿ, ರಂಗೋಪಂತ್ ನಾಗರಾಜ ರಾವ್.

<><><>

ರಂಗೋಪಂತ್ ನಾಗರಾಜ ರಾವ್ ಧ್ವನಿ 35 ಸೆಕೆಂದುಗಳು

<><><>

ಕರ್ನಾಟಕ ರಾಜ್ಯ ವೈಜ್ಞಾನಿಕ ಸಂಶೋಧನಾ ಪರಿ ’ತ್ತಿನ, 5ನೇ ರಾಜ್ಯ ಮಟ್ಟದ ವೈಜ್ಞಾನಿಕ ಸಮ್ಮೇಳನ, ಇಂದಿನಿಂದ ಯಾದಗಿರಿ ನಗರದ ಜಿಲ್ಲಾ ಕ್ರೀಡಾಂಗಣದಲ್ಲಿ ಆಯೋಜಿತವಾಗಿದೆ. ಈ ಮಧ್ಯಾಹ್ನ  2.30 ಕ್ಕೆ ಜಿಲ್ಲಾ ಉಸ್ತುವಾರಿ ಸಚಿವ ಶರಣ ಬಸಪ್ಪ ದರ್ಶನಾಪುರ ಸಮ್ಮೇಳನಕ್ಕೆ ಚಾಲನೆ ನೀಡಲಿದ್ದಾರೆ.  ಮೂರು ದಿನಗಳ ವೈಜ್ಞಾನಿಕ ಸಮ್ಮೇಳನಕ್ಕೆ, ವೇದಿಕೆ ಮುಂಭಾಗ ಪ್ರೇಕ್ಷಕರಿಗಾಗಿ 8 ಸಾವಿರ ಆಸನಗಳು, ಸುತ್ತಲೂ 18 ವಿಜ್ಞಾನ ವಸ್ತು ಪ್ರದರ್ಶನ ಮಳಿಗೆಗಳ ವ್ಯವಸ್ಥೆ ಮಾಡಲಾಗಿದೆ.

<><><>

ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು, ಬಂಗ್ರಕೂಳೂರಿನಲ್ಲಿ ಆಯೋಜಿತ 9 ನೇ ವರ್ಷದ ರಾಮ ಲಕ್ಷ್ಮಣ ಜೋಡುಕರೆ ಕಂಬಳ ಉದ್ಘಾಟನಾ ಸಮಾರಂಭದಲ್ಲಿ ಭಾರತದ ಒಲಿಂಪಿಯನ್ ಬಾಕ್ಸರ್, ಮೇರಿ ಕೋಮ್ ಭಾಗವಹಿಸಿದ್ದರು. ಈ ಬಗ್ಗೆ ತಮ್ಮ ಸಾಮಾಜಿಕ ಜಾಲತಾಣದಲ್ಲಿ ಮಾಹಿತಿ ಹಂಚಿಕೊಂಡಿರುವ ಸಂಸದ ಬ್ರಿಜೇಶ್ ಚೌಟ, ಕಂಬಳ ಉತ್ಸವದ ಉದ್ಘಾಟನಾ ಕಾರ್ಯಕ್ರಮದಲ್ಲಿ ದೇಶದ ಬಾಕ್ಸಿಂಗ್ ಐಕಾನ್ ಪಾಲ್ಗೊಂಡಿರುವುದು ದಕ್ಷಿಣ ಕನ್ನಡ ಜಿಲ್ಲೆಯ ಜನರಿಗೆ ಹೆಮ್ಮೆಯ ಕ್ಷಣವಾಗಿದೆ ಎಂದು ಬಣ್ಣಿಸಿದ್ದಾರೆ.

<><><>

ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.

<><><>

ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ, ಮಧ್ಯಾಹ್ನ 1 ಗಂಟೆ 10 ನಿಮಿಷಕ್ಕೆ

<><><>